## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಹೆಚ್.ಆರ್. ರಮೇಶ್, ಅಧ್ಯಕ್ಷರು, ಜಿನ್ನಾಗರ ಗ್ರಾಮ ಪಂಚಾಯಿತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು – ಆದೇಶ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1135 ಗ್ರಾಪಂಅ 2018, ದಿನಾಂಕ: 02.02.2019.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ರವರ ಪತ್ರ ಸಂಖ್ಯೆ: ಗ್ರಾಅಪ 1165 ಗ್ರಾಪಂಕಾ 2018, ದಿನಾಂಕ:23.03.2019.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ ರವರು ಪತ್ರ ಸಂಖ್ಯೆ:ತುಜಿಪ/ಅಭಿ/ವಿವ-3/ಅ.ಅ./419/2017-18, ದಿನಾಂಕ:13.11.2018.
4. ಪ್ರಾದೇಶಿಕರ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ: ಪ್ರಾಆಕ/ಅಭಿವೃದ್ಧಿ/ಸಿಆರ್/25/2019-20, ದಿನಾಂಕ:12.12.2019.

**ಪ್ರಸ್ತಾವನೆ:**

ಶ್ರೀ ಹೆಚ್.ಆರ್. ರಮೇಶ್, ಅಧ್ಯಕ್ಷರು, ಜಿನ್ನಾಗರ ಗ್ರಾಮ ಪಂಚಾಯಿತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ರವರು ಜಿನ್ನಾಗರ ಗ್ರಾಮ ಪಂಚಾಯಿತಿಯಲ್ಲಿ ಮಾಡಿರುವ ಅವ್ಯವಹಾರಗಳ ಬಗ್ಗೆ ಉಲ್ಲೇಖ (1) ಮತ್ತು (2) ರ ಆದೇಶಗಳ ಸೂಚನೆಯಂತೆ ವಿಚಾರಣೆ ನಡೆಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ ರವರಿಗೆ ನಿರ್ದೇಶನ ನೀಡಲಾಗಿತ್ತು. ಅದರಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ ರವರು ಆರೋಪಿತ ಅಧ್ಯಕ್ಷರ ವಿರುದ್ಧ ಇದಂತಹ ಆರೋಪಗಳ ಬಗ್ಗೆ ವಿಚಾರಣೆ ಮಾಡಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ 1993 ರ ಪ್ರಕರಣ 48(4) ಮತ್ತು 48(5) ರನ್ವಯ ಕ್ರಮ ಜರುಗಿಸುವಂತೆ ಮೇಲೆ ಓದಲಾದ (3) ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ (4) ರಲ್ಲಿ ಓದಲಾದ ಪತ್ರದಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಹಾಗೂ ವಿಚಾರಣಾಧಿಕಾರಿಗಳು ರವರು ದಿನಾಂಕ:08.07.2019, 26.07.2019 ಹಾಗೂ 14.10.2019 ರಂದು ವಿಚಾರಣೆ ಮಾಡಲಾಗಿರುತ್ತದೆ. ಶ್ರೀ ಹೆಚ್.ಆರ್. ರಮೇಶ್, ಅಧ್ಯಕ್ಷ ರವರು ದಿನಾಂಕ:08.11.2019 ರಂದು ವಿಚಾರಣೆಗೆ ಹಾಜರಾಗಿರುತ್ತಾರೆ. ಆದರೆ ಯಾವುದೇ ಲಿಖಿತ ಸಮಜಾಯಿಷಿಯನ್ನು ನೀಡಿರುವುದಿಲ್ಲ. ವಾದ ವಿವಾದ ಮತ್ತು ಹೇಳಿಕೆಗಳನ್ನು ಪರಿಶೀಲಿಸಲಾಗಿ, ಪ್ರತಿ ಮಾಹೆ ಸಾಮಾನ್ಯ ಸಭೆ ನಡೆಸದೇ ಇರುವುದು 13ನೇ ಹಣಕಾಸು ಯೋಜನೆಯಡಿ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಮೋದನೆ ಪಡೆಯದೇ ನಿಯಮ ಬಾಹಿರವಾಗಿ ವೆಚ್ಚ ಮಾಡಿರುವುದು ಅವರ ಹೆಂಡತಿಯಾದ ಶ್ರೀಮತಿ ಹೆಚ್.ಕೆ. ಹೇಮಲತಾ ಇವರ ಹೆಸರಿಗೆ 13ನೇ ಹಣಕಾಸು ಯೋಜನೆಯ ಖಾತೆಯಿಂದ ಚೆಕ್‌ನ್ನು ನೀಡಿರುವುದು ಹಾಗೂ ಸಹೋದರರಾದ ಶ್ರೀ ಬೋರೇಗೌಡರ ಹೆಸರಿಗೆ ಗ್ರಾಮ ಪಂಚಾಯಿತಿ ಕಾಮಗಾರಿ ತುಂಡು ಗುತ್ತಿಗೆಯನ್ನು ನೀಡಿ ಹಣ ಪಾವತಿಸಿರುವುದು ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಹಾಗೂ ಸ್ವಚ್ಛ ಭಾರತ್ ಮಿಷನ್ ಯೋಜನೆ ಕಾಮಗಾರಿಗಳ ಫಲಾನುಭವಿಗಳಿಗೆ ನಿಗಧಿತ ಸಮಯದಲ್ಲಿ ಅನುದಾನ ಬಿಡುಗಡೆ ಮಾಡಲು ಡ್ಯಾಂಗಲ್ ನೀಡದೆ ಇರುವುದು 14ನೇ ಹಣಕಾಸು ಯೋಜನೆ ಗ್ರಾಮ ನೈರ್ಮಲ್ಯ ಕಾಮಗಾರಿಯನ್ನು ಗುತ್ತಿಗೆದಾರರಾದ ಶ್ರೀ ಹೆಚ್.ಸಿ. ಯತಿರಾಜ್ ರವರು ನಿರ್ವಹಿಸಿದ್ದು, ದಿನಾಂಕ:19.07.2017 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಬಿಲ್ ಮತ್ತು ಎಂ.ಬಿ. ಪುಸ್ತಕದಲ್ಲಿ ಸಹಿ ಮಾಡಿ ಬಟವಾಡಿ ಮಾಡಲು ಆದೇಶಕ್ಕೆ ಮಂಡಿಸಿದ್ದು, ಇದುವರೆವಿಗೂ ಬಿಲ್ ಪಾಸು ಮಾಡದೆ ಇರುವುದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ ರವರು ನೀಡಿರುವ ವರದಿ ಹಾಗೂ ಸಲ್ಲಿಸಿರುವ ದಾಖಲೆಗಳಿಂದ ಸಾಬೀತಾಗಿರುತ್ತದೆ. ಶ್ರೀ ಹೆಚ್.ಆರ್. ರಮೇಶ್ ರವರು ಸಮರ್ಪಕವಾಗಿ ಜವಾಬ್ದಾರಿಯುತವಾಗಿ ಹಾಗೂ ಪಾರದರ್ಶಕವಾಗಿ ತಮ್ಮ

...2

ಕರ್ತವ್ಯಗಳನ್ನು ನಿಭಾಯಿಸದೆ ಇರುವುದು ಸಾಬೀತಾಗಿರುವುದರಿಂದ ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ), 48(4) ಹಾಗೂ 48(5) ರಡಿ ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ವಿವರಿಸಿರುವಂತೆ ಪ್ರಕರಣವನ್ನು ಪರಿಶೀಲಿಸಲಾಗಿ, ಶ್ರೀ ಹೆಚ್.ಆರ್. ರಮೇಶ್, ಅಧ್ಯಕ್ಷರು, ಜಿನ್ನಾಗರ ಗ್ರಾಮ ಪಂಚಾಯಿತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ಮಾಡಲಾಗಿರುವ ಆರೋಪಗಳು ಸಾಬೀತಾಗಿರುವುದರಿಂದ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಶಿಫಾರಸ್ಸಿನಂತೆ ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 48(4) ಮತ್ತು 48(5) ರನ್ವಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವದಿಂದ ತೆಗೆದು ಹಾಕಲು ಸರ್ಕಾರವು ತೀರ್ಮಾನಿಸಿದೆ.

ಅದರಂತೆ, ಈ ಕೆಳಕಂಡ ಆದೇಶ

**<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/62/ಗ್ರಾಪಂಅ/2020</u>**

**<u>ಬೆಂಗಳೂರು, ದಿನಾಂಕ:25-02-2020.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಹೆಚ್.ಆರ್. ರಮೇಶ್, ಅಧ್ಯಕ್ಷರು, ಜಿನ್ನಾಗರ ಗ್ರಾಮ ಪಂಚಾಯಿತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 48(4) ಮತ್ತು 48(5) ರನ್ವಯ ಸದರಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವದಿಂದ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ<br>ಮತ್ತು ಅವರ ಹೆಸರಿನಲ್ಲಿ,

B. Naveenkumar 25/02/2020<br>(ನವೀನ್‌ಕುಮಾರ್ ಬಿ.)<br>ಉಪನಿರ್ದೇಶಕರು ಮತ್ತು ಪದನಿಮಿತ್ತ<br>ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ.)<br>ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

25.2.2020

<u>ಗೆ:</u>

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ.
2) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಕುಣಿಗಲ್, ತುಮಕೂರು ಜಿಲ್ಲೆ.
3) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಜಿನ್ನಾಗರ ಗ್ರಾಮ ಪಂಚಾಯಿತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.
4) ಸಂಬಂಧಿಸಿದವರಿಗೆ (ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಕುಣಿಗಲ್, ತುಮಕೂರು ಜಿಲ್ಲೆ ರವರ ಮುಖಾಂತರ)
5) ಗಣಕ ಕೋಶ.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.